**ಸಾಕ್ಷಿಗೆ ದಿನಾಂಕಃ16-07-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. KLR ವಕೀಲರಿಂದ ::**

DW1 ರವರು ಪಿಳ್ಳೇನಹಳ್ಳಿ ಗ್ರಾಮಸ್ಥರು. DW1 ರವರ ತಂದೆಯ ಹೆಸರು ಚಂದ್ರಪ್ಪ ಆಗಿರುತ್ತದೆ. ಅವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸ್ವಂತ ಊರು ಸೌತನಹಳ್ಳಿ ಆದರೆ ನನ್ನ ಗಂಡನ ಮನೆ ಕೋರನಹಳ್ಳಿಯಲ್ಲಿ ಇರುತ್ತದೆ. ನಾನು ಕೋರನಹಳ್ಳಿ ಗ್ರಾಮಕ್ಕೆ ಬಂದು ಸುಮಾರು 25 ವರ್ಷ ಆಗಿರುತ್ತದೆ. DW1 ದಾವಾ ಶೆಡ್ಯೂಲ್ ಸ್ವತ್ತನ್ನು ಯಾವ ಕಾರಣಕ್ಕೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. DW1 ರವರಿಗೆ ದಾವಾ ಆಸ್ತಿಯು ಅವರ ಕುಟುಂಬದಲ್ಲಿ ಆದ ವಿಭಾಗದಡಿಯಲ್ಲಿ ಬಂದಿರುತ್ತದೆ. ಸದರಿ ವಿಭಾಗ ಪತ್ರವನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಸದರಿ ವಿಭಾಗ ಪತ್ರದ ಅಡಿಯಲ್ಲಿ ಯಾರಿಗೆಲ್ಲಾ ಭಾಗ ಆಗಿರುತ್ತದೆ ಎಂದು ನನಗೆ ಸರಿಯಾಗಿ ತಿಳಿದಿರುವುದಿಲ್ಲ. ಈ ದಾವಾ ಆಸ್ತಿಯ ಬಗ್ಗೆ ಸಂಪೂರ್ಣ ಮಾಹಿತಿ ನನಗೆ ಇರುವುದಿಲ್ಲ, ಅದು ನನ್ನ ಗಂಡನಿಗೆ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಸ್ವಲ್ಪ ಮಟ್ಟಿಗೆ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ ದಾಖಲಾತಿಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. DW1 ರವರ ಮಕ್ಕಳು ಏನು ಕೆಲಸ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. DW1 ರವರಿಗೆ ಇಬ್ಬರು ಮಕ್ಕಳು ಇದ್ದು, ಅವರ ಹೆಸರುಗಳು ರೋಜಾ ಹಾಗೂ ಶಿಲ್ಪ ಆಗಿರುತ್ತದೆ.

ನಾನು 10 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ಅದು ಖಾಲಿ ಜಮೀನು ಆಗಿತ್ತು. DW1 ರವರ ತಂದೆಗೆ ದಾವಾ ಆಸ್ತಿಯು ಅವರ ತಾಯಿಯ ಮುಖಾಂತರ ಬಂದಿರುತ್ತದೆ ಎಂದು ನಮ್ಮ ಕ್ರಯಪತ್ರದಲ್ಲಿ ತೋರಿಸಿರುತ್ತೇವೆ. DW1 ರವರ ತಂದೆಗೆ ಪಿತ್ರಾರ್ಜಿತವಾಗಿ ಬಂದ ಹಲವಾರು ಆಸ್ತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: